**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** 2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸುವ ಕುರಿತು.

**ಓದಲಾಗಿದೆ:**
1. ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು ಇವರ ಪತ್ರ ಸಂಖ್ಯೆ:KSNDMC/2023/4/MISC/93 ದಿನಾಂಕ:22-8-2023, ಮತ್ತು 04-09-2023.
2. ಸಚಿವ ಸಂಪುಟ ಉಪಸಮಿತಿಯ ದಿನಾಂಕ: 18-07-2023, 22-08-2023, 04-09-2023 ಮತ್ತು 13-9-2023 ರಂದು ನಡೆದ ಸಭೆಗಳ ನಡವಳಿ.
3. ಸುತ್ತೋಲೆ ಸಂಖ್ಯೆ: ಕಂಇ 429 ಟಿಎನ್‌ಆರ್ 2023, ದಿನಾಂಕ: 25.08.2023 & 04.09.2023.
4. ಸಚಿವ ಸಂಪುಟದ ಟಿಪ್ಪಣಿ ಸಂಖ್ಯೆ: C.450/2023 ದಿನಾಂಕ: 07-09-2023.

*****

**ಪ್ರಸ್ತಾವನೆ:**

2023ನೇ ಸಾಲಿನ ನೈಋತ್ಯ ಮುಂಗಾರು ರಾಜ್ಯಕ್ಕೆ ದಿನಾಂಕ: 08.06.2023 ರಂದು ಪ್ರವೇಶಿಸಿ, ರಾಜ್ಯದ ಎಲ್ಲೆಡೆ 14 ದಿನಗಳಲ್ಲಿ ವ್ಯಾಪಿಸಿತು. ಮುಂಗಾರು ಪ್ರವೇಶ ಮತ್ತು ವ್ಯಾಪಿಸಲು ಸಾಮಾನ್ಯ ದಿನಾಂಕಕ್ಕಿಂತ ಒಂದು ವಾರ ತಡವಾಗಿದೆ. ಜೂನ್ ಮಾಹೆಯಲ್ಲಿ ಮುಂಗಾರು ದುರ್ಬಲಗೊಂಡು ವಾಡಿಕೆಗಿಂತ ಶೇ.56% ಮಳೆ ಕೊರತೆ ಉಂಟಾಯಿತು, ಜುಲೈ ಮಾಹೆಯಲ್ಲಿ ಮುಂಗಾರು ಚುರುಕುಗೊಂಡು ವಾಡಿಕೆಗಿಂತ ಶೇ.29% ಹೆಚ್ಚು ಮಳೆಯಾಗಿದ್ದು, ಈ ಮಳೆಯು ಕೇವಲ ಒಂದು ವಾರ ಮಾತ್ರ ಕೇಂದ್ರೀಕೃತವಾಗಿತ್ತು. ಆಗಸ್ಟ ಮಾಹೆಯಲ್ಲಿ ವಾಡಿಕೆಗಿಂತ ಶೇ.73% ಮಳೆ ಕೊರತೆಯಾಗಿದ್ದು, ಕಳೆದ 125 ವರ್ಷಗಳಲ್ಲಿ ಅತಿ ಕಡಿಮೆ ಮಳೆ ದಾಖಲಾಗಿರುವುದು ಕಂಡು ಬಂದಿರುತ್ತದೆ. ರಾಜ್ಯದ ಮಳೆ, ಬೆಳೆ ಜಲಾಶಯಗಳ ಸಂಗ್ರಹಣಾ ಅಂತರ್ಜಲ, ಕುಡಿಯುವ ನೀರು ಹಾಗೂ ಮೇವಿನ ಪರಿಸ್ಥಿತಿ ಕುರಿತು ಕಾಲಕಾಲಕ್ಕೆ ರಾಜ್ಯ ಹವಮಾನ ಅವಲೋಕನಾ ಸಮಿತಿಯು ಪರಿಶೀಲಿಸಿದೆ. ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಸರ್ಕಾರದ ಮುಖ್ಯ ಕಾರ್ಯದರ್ಶಿರವರು ಅವಲೋಕಿಸಿರುತ್ತಾರೆ.

ಕೇಂದ್ರ ಸರ್ಕಾರದ ಬರ ಕೈಪಿಡಿ-2020 ರನ್ವಯ ಕಡ್ಡಾಯ ಮತ್ತು ತತ್ಪರಿಣಾಮ ಸೂಚಕಗಳ ನಿರಂತರ ಮೇಲ್ವಿಚಾರಣೆಯ ಆಧಾರದ ಮೇಲೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC) ದಿನಾಂಕ:01-06-2023 ರಿಂದ 19.08.2023ಅವಧಿಯ ವರದಿಯಂತೆ ರಾಜ್ಯದಲ್ಲಿ 487 ಮಿ.ಮಿ. ಮಳೆಯಾಗಿದ್ದು, ವಾಡಿಕೆ ಮಳೆ (635 ಮಿ.ಮಿ.)ಗೆ ಹೋಲಿಸಿದಾಗ ಶೇ.23% ರಷ್ಟು ಮಳೆಕೊರತೆ ಕಂಡು ಬಂದಿರುತ್ತದೆ. ಬರ ಕೈಪಿಡಿ-2020 ರ ಮಾರ್ಗಸೂಚಿಯನ್ವಯ ಬರ ಘೋಷಿಸಲು ಸೂಚಿಸಿರುವ ಕಡ್ಡಾಯ ಮಾನದಂಡಗಳಾದ ಶೇ.60%ಕ್ಕಿಂತ ಹೆಚ್ಚು ಮಳೆ ಕೊರತೆ ಅಥವಾ ಸತತ ಮೂರು ವಾರಗಳಲ್ಲಿ ಶುಷ್ಕ ವಾತಾವರಣ ಹಾಗೂ ತತ್ಪರಿಣಾಮ ಮಾನದಂಡಗಳಾದ ತೇವಾಂಶ ಕೊರತೆ, ಉಪಗ್ರಹ ಆಧಾರಿತ ಬೆಳೆ ಸೂಚ್ಯಾಂಕ, ಬೆಳೆ ಬಿತ್ತನೆ ಪ್ರದೇಶ, ಹಾಗೂ ಜಲಸಂಪನ್ಮೂಲ ಸೂಚ್ಯಾಂಕದಲ್ಲಿನ ತೀವ್ರತೆಯನ್ನು ಆಧರಿಸಿ ಮೌಲ್ಯಮಾಪನ ಮಾಡಿ ಒಟ್ಟಾರೆ 113 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಕಂಡುಬಂದಿದೆ.

...2

17/9/2023
(ಟಿ.ಸಿ. ಕಾಂತರಾಜು)
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿ.ನಿ. ಹಾಗೂ ನೋಂದಣಿ, ಸ್ಟಾಂಪು ಮುದ್ರಾಂಕ)

ದಿನಾಂಕ:22.08.2023 ರಂದು ನಡೆದ ಸಂಪುಟ ಉಪಸಮಿತಿಯ ಸಭೆಯು ಬರ ಕೈಪಿಡಿ-2020 ರ ಪ್ಯಾರಾ 3.2.6 ರ ನಿಬಂಧನೆಗಳನ್ವಯ ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಯ ಕೃಷಿ, ತೋಟಗಾರಿಕೆ ಮತ್ತು ಕಂದಾಯ ಅಧಿಕಾರಿ/ಇತರೆ ಸಿಬ್ಬಂದಿಗಳನ್ನು ಒಳಗೊಂಡ ತಂಡಗಳನ್ನು ರಚಿಸಿ ಬರ ಪರಿಸ್ಥಿತಿ ಕಂಡುಬಂದ 113 ತಾಲ್ಲೂಕುಗಳ 1519 ಗ್ರಾಮಗಳನ್ನು Random ಆಗಿ ಗುರುತಿಸಿ ಇವುಗಳಲ್ಲಿನ ಒಟ್ಟು 14,228 ಪ್ಲಾಟ್‌ಗಳಲ್ಲಿ ಮೊಬೈಲ್ App ಮೂಲಕ ಬೆಳೆ ಹಾನಿ ಕ್ಷೇತ್ರ ದೃಢೀಕರಣ (Ground Truthing)ನ್ನು ಕೈಗೊಂಡಿರುತ್ತಾರೆ. ಅದರಂತೆ ಮೇಲೆ (3)ರಲ್ಲಿ ಓದಲಾದ ದಿನಾಂಕ: 25.08.2023 ರಲ್ಲಿ ಸುತ್ತೋಲೆಯನ್ನು ಹೊರಡಿಸಿ ಬೆಳೆ ಸಮೀಕ್ಷೆ ನಡೆಸುವಂತೆ ತಿಳಿಸಿದೆ. ಅದರಂತೆ ಶೇ.50ಕ್ಕಿಂತ ಹೆಚ್ಚು ಬೆಳೆ ನಷ್ಟವಾಗಿರುವ 62 ತಾಲೂಕುಗಳನ್ನು ತೀವ್ರ ಬರ ಹಾಗೂ 33% -50%ರಷ್ಟು ಬೆಳೆ ನಷ್ಟವನ್ನು ವರದಿ ಮಾಡಿರುವ 51 ತಾಲ್ಲೂಕುಗಳು ಸಾಧಾರಣ ಬರ ಎಂದು ವರ್ಗೀಕರಿಸಲಾಗಿದೆ.

ದಿನಾಂಕ:1-6-2023 ರಿಂದ 02.09.2023 ಅವಧಿಯಲ್ಲಿ ರಾಜ್ಯದಲ್ಲಿ 512 ಮಿಮಿ ಮಳೆಯಾಗಿದ್ದು, ವಾಡಿಕೆ ಮಳೆ (701ಮಿಮಿ)ಗೆ ಹೋಲಿಸಿದಾಗ ಶೇ.27%ರಷ್ಟು ಮಳೆಕೊರತೆ ಕಂಡು ಬಂದಿದೆ. ಬರ ಮಾನದಂಡಗಳನ್ನು ಪರಿಗಣಿಸಿ ಹೊಸದಾಗಿ 83 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಕಂಡುಬಂದಿರುವ ತಾಲ್ಲೂಕುಗಳೆಂದು KSNDMC ಸಂಸ್ಥೆಯು ವರದಿ ನೀಡಿದೆ. ಈ ಬಗ್ಗೆ ದಿನಾಂಕ: 04-09-2023ರಂದು ನಡೆದ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಈಗಾಗಲೇ ಬೆಳೆ ಹಾನಿ ಸಮೀಕ್ಷೆ ನಡೆಸಿ ಸಾಧಾರಣ ಬರವೆಂದು ಗುರುತಿಸಲಾದ 51 ತಾಲ್ಲೂಕುಗಳ ಜೊತೆಗೆ ದಿನಾಂಕ: 02-9-2023 ವರದಿಯನುಸಾರ ರಾಜ್ಯದಲ್ಲಿ 83 ತಾಲ್ಲೂಕುಗಳು ಸೇರಿ 134 ತಾಲ್ಲೂಕುಗಳಲ್ಲಿ ಬೆಳೆ ಹಾನಿ ಕ್ಷೇತ್ರ ದೃಢೀಕರಣ (Ground Truthing) ಕೈಗೊಳ್ಳುವಂತೆ ಹಾಗೂ ಸದರಿ ಪ್ರಸ್ತಾವನೆಯ ಬಗ್ಗೆ ಸಚಿವ ಸಂಪುಟಕ್ಕೆ ಮಂಡಿಸುವಂತೆ ತೀರ್ಮಾನಿಸಲಾಯಿತು. ಅದರಂತೆ ಮೇಲೆ (3)ರಲ್ಲಿ ಓದಲಾದ ದಿನಾಂಕ: 04.09.2023 ರಲ್ಲಿ ಸುತ್ತೋಲೆಯನ್ನು ಹೊರಡಿಸಿ ಬೆಳೆ ಸಮೀಕ್ಷೆ ನಡೆಸುವಂತೆ ತಿಳಿಸಿದೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ:07-09-2023ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದಲ್ಲಿ ನೈರುತ್ಯ ಮುಂಗಾರಿನಲ್ಲಿ ಕೊರತೆಯಿಂದಾಗಿ ಬರ ಪರಿಸ್ಥಿತಿ ಉಂಟಾಗಿರುವ ಕುರಿತು ಸಚಿವ ಸಂಪುಟವು ದೀರ್ಘವಾಗಿ ಚರ್ಚಿಸಿ ಈಗಾಗಲೇ 62 ತಾಲ್ಲೂಕುಗಳಲ್ಲಿ ತೀವ್ರ ಬರ ಎಂದು ಬೆಳೆ ಹಾನಿ ಸಮೀಕ್ಷೆಯಿಂದ ದೃಢಪಟ್ಟಿದ್ದು, ಇನ್ನು ಹೆಚ್ಚುವರಿಯಾಗಿ 134 ತಾಲ್ಲೂಕುಗಳಲ್ಲಿ ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಯ ಕೃಷಿ, ತೋಟಗಾರಿಕೆ ಮತ್ತು ಕಂದಾಯ ಅಧಿಕಾರಿ/ಇತರೆ ಸಿಬ್ಬಂದಿಗಳನ್ನು ಒಳಗೊಂಡ ತಂಡಗಳನ್ನು ರಚಿಸಿ ಒಟ್ಟು 134 ತಾಲ್ಲೂಕುಗಳಲ್ಲಿನ Random ಆಗಿ ಗುರುತಿಸಿ ಇವುಗಳಲ್ಲಿ ಒಟ್ಟು 19,075 ಪ್ಲಾಟ್‌ಗಳಲ್ಲಿ ಮೊಬೈಲ್ App ಮೂಲಕ ಬೆಳೆ ಹಾನಿ ಕ್ಷೇತ್ರ ದೃಢೀಕರಣ (Ground Truthing) ಕೈಗೊಂಡು, ಸದರಿ ವರದಿ ಮುಂದಿನ ಕೆಲವು ದಿನಗಳಲ್ಲಿ ಬರುವುದರಿಂದ ನಂತರ ಬರ ಘೋಷಣೆಯ ಬಗ್ಗೆ ತೀರ್ಮಾನಿಸಲು ಸಚಿವ ಸಂಪುಟ ನಿರ್ಧರಿಸಿದೆ.

ದಿನಾಂಕ: 13.09.2023ರಂದು ಜರುಗಿದ ಸಚಿವ ಸಂಪುಟ ಉಪ ಸಮಿತಿಯು ಹೆಚ್ಚುವರಿಯಾಗಿ 134 ತಾಲ್ಲೂಕುಗಳಿಗೆ ಜಿಲ್ಲಾಧಿಕಾರಿಗಳಿಂದ ಬೆಳೆ ಹಾನಿ ಸಮೀಕ್ಷೆ ಬಗ್ಗೆ ವರದಿಯನ್ನು ಪಡೆದು ಪರಿಶೀಲಿಸಿ, ಮೊದಲು ಸಾಧಾರಣವೆಂದು ಗುರುತಿಸಲಾದ 51 ತಾಲ್ಲೂಕುಗಳಲ್ಲಿ ಮತ್ತೊಮ್ಮೆ ಬೆಳೆ ಹಾನಿ ಕ್ಷೇತ್ರ ದೃಢೀಕರಣ (Ground Truthing) ಕೈಗೊಂಡ ನಂತರ 41 ತಾಲ್ಲೂಕುಗಳು ತೀವ್ರ ಬರ ವರ್ಗದಲ್ಲಿ ಹಾಗೂ ಉಳಿದ 10 ತಾಲ್ಲೂಕುಗಳು ಸಾಧಾರಣ ಬರ ವರ್ಗದಲ್ಲಿ ಗುರುತಿಸಲಾಗಿದೆ. ಹೊಸದಾಗಿ ಬರ ಪರಿಸ್ಥಿತಿ

...3

13/9/2023
(ಟಿ.ಸಿ. ಕಾಂತರಾಜ್)
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿ.ವಿ. ಹಾಗೂ ನೋಂದಣಿ ಮತ್ತು ಮುದ್ರಾಂಕ)

ಕಂಡು ಬಂದ 83 ತಾಲ್ಲೂಕುಗಳ ಪೈಕಿ 58 ತಾಲ್ಲೂಕುಗಳು ತೀವ್ರ ಬರ ಹಾಗೂ 24 ತಾಲ್ಲೂಕುಗಳು ಸಾಧಾರಣ ಬರವೆಂದು ನಿರ್ಣಯಿಸಿದೆ. ಅದರಂತೆ ಕೇಂದ್ರ ಸರ್ಕಾರ ಬರ ನಿರ್ವಹಣೆ ಕೈಪಿಡಿ – 2020 ರಲ್ಲಿ ನೀಡಿರುವ ಬರ ಘೋಷಣೆಯ ಮಾರ್ಗಸೂಚಿಯನ್ವಯ ಬರ ಘೋಷಣೆಯ ಮಾನದಂಡಗಳನ್ನು ಪರಿಗಣಿಸಿ ಒಟ್ಟಾರೆಯಾಗಿ ರಾಜ್ಯದ 31 ಜಿಲ್ಲೆಗಳ 236 ತಾಲ್ಲೂಕುಗಳ ಪೈಕಿ 195 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಕಂಡುಬಂದಿದೆ. ಈ ಎಲ್ಲಾ ತಾಲ್ಲೂಕುಗಳಲ್ಲಿ ಬೆಳೆಹಾನಿ ಸಮೀಕ್ಷೆ (Ground Truthing) ಕೈಗೊಂಡ ನಂತರ ಅಂತಿಮವಾಗಿ 161 ತಾಲ್ಲೂಕುಗಳನ್ನು ತೀವ್ರ ಬರ ಪೀಡಿತ ತಾಲ್ಲೂಕುಗಳು ಹಾಗೂ 34 ತಾಲ್ಲೂಕುಗಳನ್ನು ಸಾಧಾರಣ ಬರ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲೆಂದು ತುರ್ತು ಬರ ನಿರ್ವಹಣಾ ಜವಾಬ್ದಾರಿ ವಹಿಸಬೇಕಾದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (KSDMA) ಅಧ್ಯಕ್ಷರ ಅನುಮೋದನೆ ಪಡೆಯಲು ತೀರ್ಮಾನಿಸಲಾಯಿತು. ಈ ಎಲ್ಲಾ ಪ್ರಕ್ರಿಯೆಯನ್ನು ಕಾಲಕಾಲಕ್ಕೆ KSDMA ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅವಗಾಹನೆಗೆ ತರಲಾಗಿದೆ.

ಸರ್ಕಾರವು ದಿನಾಂಕ:13.09.2023ರ ಸಚಿವ ಸಂಪುಟ ಉಪ ಸಮಿತಿಯ ತೀರ್ಮಾನದಂತೆ ಮಾನ್ಯ ಮುಖ್ಯ ಮಂತ್ರಿಯವರ ಅನುಮೋದನೆಯನ್ನು ಪಡೆದು ರಾಜ್ಯದ 31 ಜಿಲ್ಲೆಗಳ 236 ತಾಲ್ಲೂಕುಗಳ ಪೈಕಿ 195 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಕಂಡುಬಂದಿದೆ. ಈ ಎಲ್ಲಾ ತಾಲ್ಲೂಕುಗಳಲ್ಲಿ ಬೆಳೆಹಾನಿ ಸಮೀಕ್ಷೆ (Ground Truthing) ಕೈಗೊಂಡ ನಂತರ ಅಂತಿಮವಾಗಿ 161 ತಾಲ್ಲೂಕುಗಳನ್ನು ತೀವ್ರ ಬರ ಪೀಡಿತ ತಾಲ್ಲೂಕುಗಳು ಹಾಗೂ 34 ತಾಲ್ಲೂಕುಗಳನ್ನು ಸಾಧಾರಣ ಬರ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ: ಕಂಇ 449 ಟಿಎನ್ಆರ್ 2023,**
**ದಿನಾಂಕ:13-09-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕೇಂದ್ರ ಸರ್ಕಾರದ ಬರ ನಿರ್ವಹಣೆ ಕೈಪಿಡಿ – 2020ರ ಬರ ಘೋಷಣೆ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ವಯ ಜಿಲ್ಲಾಧಿಕಾರಿಗಳಿಂದ ಬೆಳೆಹಾನಿ ಸಮೀಕ್ಷೆಯ(Ground Truthing) ವರದಿಯನುಸಾರ 2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದ 31 ಜಿಲ್ಲೆಗಳ 236 ತಾಲ್ಲೂಕುಗಳ ಪೈಕಿ 195 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಕಂಡು ಬಂದಿದ್ದು, ಈ ಪೈಕಿ 161 ತಾಲ್ಲೂಕುಗಳನ್ನು ತೀವ್ರ ಬರಪೀಡಿತ ತಾಲ್ಲೂಕು (**ಅನುಬಂಧ-1**) ಹಾಗೂ 34 ತಾಲ್ಲೂಕುಗಳನ್ನು ಸಾಧಾರಣ ಬರಪೀಡಿತ ತಾಲ್ಲೂಕು (**ಅನುಬಂಧ-2**) ಎಂದು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ 6 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಘೋಷಿಸಿ ಆದೇಶಿಸಿದೆ.

ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಬರ ನಿರ್ವಹಣೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸರ್ಕಾರದಿಂದ ಕಾಲಕಾಲಕ್ಕೆ SDRF/NDRF ನಿಯಮಗಳನ್ವಯ ಮಾರ್ಗಸೂಚಿಗಳನ್ನು ನೀಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
13/9/2023
**(ಟಿ.ಸಿ. ಕಾಂತರಾಜ್)**
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಹಾಗೂ ನೋಂ&ಮು)

**ಇವರಿಗೆ:**
ಸಂಕಲನಕಾರರು, ಕರ್ನಾಟಕ ವಿಶೇಷ ರಾಜ್ಯಪತ್ರ,, ವಿಕಾಸಸೌಧ, ಬೆಂಗಳೂರು – ಈ ಆದೇಶವನ್ನು ಕೂಡಲೇ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.

...4

1) ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಎಲ್ಲಾ, ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು
3) ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ ಜಿಲ್ಲೆಗಳು.
4) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5) ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6) ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು.
7) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
8) ಆಯುಕ್ತರು, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ, ಬೆಂಗಳೂರು,
9) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
10) ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ಉಸ್ತುವಾರಿ ಕೇಂದ್ರ, ಅಟ್ಟೂರು ಬಡಾವಣೆ ಯಲಹಂಕ, ಬೆಂಗಳೂರು.
11) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
12) ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
13) ಉಪ ನಿರ್ದೇಶಕರು, ಖಜಾನೆ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
14) ಎಲ್ಲಾ ಜಿಲ್ಲೆಗಳ ಜಿಲ್ಲಾ ಖಜಾನಾಧಿಕಾರಿಗಳು,
15) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
16) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ,
17) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ,
18) ಮಾನ್ಯ ಲೋಕೋಪಯೋಗಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
19) ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
20) ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
21) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
22) ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
23) 23 ಜಿಲ್ಲೆಗಳ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
24) ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು. ಬೆಂಗಳೂರು.
25) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
26) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
27) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
28) ಸರ್ಕಾರದ ಜಂಟಿ ಕಾರ್ಯದರ್ಶಿ(ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು.
29) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
30) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
31) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
32) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
33) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
34) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
35) ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಪಶುವೈದ್ಯ ಇಲಾಖೆ, ವಿಕಾಸಸೌಧ, ಬೆಂಗಳೂರು.

..5.

36)ಸರ್ಕಾರದ ಕಾರ್ಯದರ್ಶಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ವಿಕಾಸಸೌಧ, ಬೆಂಗಳೂರು.
37) ಸರ್ಕಾರದ ಕಾರ್ಯದರ್ಶಿ, ಸಣ್ಣನೀರಾವರಿ ಇಲಾಖೆ, ವಿಕಾಸಸೌಧ, ಬೆಂಗಳೂರು.
38)ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
39)ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
40) ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಲೆಕ್ಕಪತ್ರ ಶಾಖೆ.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

## ಅನುಬಂಧ-1

### 2023ರ ಮುಂಗಾರಿನಲ್ಲಿ ತೀವ್ರ ಬರ ಪೀಡಿತ 161 ತಾಲ್ಲೂಕುಗಳ ಪಟ್ಟಿ

| ಕ್ರ.ಸಂ | ಜಿಲ್ಲೆಗಳು | ಕ್ರ.ಸಂ | ತಾಲ್ಲೂಕುಗಳು |
|---|---|---|---|
| 1 | ಬೆಂಗಳೂರು ನಗರ | 1 | ಬೆಂಗಳೂರು ಪೂರ್ವ |
| 2 | ಬೆಂಗಳೂರು ಗ್ರಾಮಾಂತರ | 2 | ದೇವನಹಳ್ಳಿ |
| | | 3 | ದೊಡ್ಡ ಬಳ್ಳಾಪುರ |
| | | 4 | ಹೊಸಕೋಟೆ |
| | | 5 | ನೆಲಮಂಗಲ |
| 3 | ರಾಮನಗರ | 6 | ಕನಕಪುರ |
| | | 7 | ರಾಮನಗರ |
| | | 8 | ಹಾರೋಹಳ್ಳಿ |
| 4 | ಕೋಲಾರ | 9 | ಬಂಗಾರಪೇಟೆ |
| | | 10 | ಕೋಲಾರ |
| | | 11 | ಮುಳಬಾಗಿಲು |
| | | 12 | ಶ್ರೀನಿವಾಸಪುರ |
| | | 13 | ಕೆ.ಜಿ.ಎಫ್ |
| 5 | ಚಿಕ್ಕಬಳ್ಳಾಪುರ | 14 | ಬಾಗೇಪಲ್ಲಿ |
| | | 15 | ಚಿಕ್ಕಬಳ್ಳಾಪುರ |
| | | 16 | ಚಿಂತಾಮಣಿ |
| | | 17 | ಗೌರಿಬಿದನೂರು |
| | | 18 | ಗುಡಿಬಂಡೆ |
| | | 19 | ಶಿಡ್ಲಘಟ್ಟ |
| 6 | ತುಮಕೂರು | 20 | ಚಿಕ್ಕನಾಯಕನಹಳ್ಳಿ |
| | | 21 | ಗುಬ್ಬಿ |
| | | 22 | ಕೊರಟಗೆರೆ |
| | | 23 | ಕುಣಿಗಲ್ |
| | | 24 | ಮಧುಗಿರಿ |
| | | 25 | ಪಾವಘಡ |
| | | 26 | ಶಿರಾ |
| | | 27 | ತಿಪಟೂರು |
| | | 28 | ತುರುವೆಕೆರೆ |
| 7 | ಚಿತ್ರದುರ್ಗ | 29 | ಚಳ್ಳಕೆರೆ |
| | | 30 | ಚಿತ್ರದುರ್ಗ |
| | | 31 | ಹಿರಿಯೂರು |
| | | 32 | ಹೊಳಲಕೆರೆ |
| | | 33 | ಹೊಸದುರ್ಗ |
| | | 34 | ಮೊಳಕಾಲ್ಮೂರು |

08/9/2023

(ಟಿ.ಸಿ. ಕಾಂತರಾಜ್)
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿ.ವಿ. ಹಾಗೂ ನೋಂದಣಿ ಮತ್ತು ಮುದ್ರಾಂಕ)

| | | | |
|---|---|---|---|
| 8 | ದಾವಣಗೆರೆ | 35 | ಚನ್ನಗಿರಿ |
| | | 36 | ದಾವಣಗೆರೆ |
| | | 37 | ಹರಿಹರ |
| | | 38 | ಹೊನ್ನಾಳಿ |
| | | 39 | ಜಗಳೂರು |
| | | 40 | ನ್ಯಾಮತಿ |
| 9 | ಮೈಸೂರು | 41 | ಹೆಚ್.ಡಿ.ಕೋಟೆ |
| | | 42 | ಹುಣಸೂರು |
| | | 43 | ಮೈಸೂರು |
| | | 44 | ನಂಜನಗೂಡು |
| | | 45 | ಪಿರಿಯಾಪಟ್ಟಣ |
| | | 46 | ಟಿ.ನರಸೀಪುರ |
| | | 47 | ಸರಗೂರು |
| | | 48 | ಸಾಲಿಗ್ರಾಮ |
| 10 | ಮಂಡ್ಯ | 49 | ಕೃಷ್ಣರಾಜಪೇಟೆ |
| | | 50 | ಮದ್ದೂರು |
| | | 51 | ಮಳವಳ್ಳಿ |
| | | 52 | ಮಂಡ್ಯ |
| | | 53 | ನಾಗಮಂಗಲ |
| | | 54 | ಪಾಂಡವಪುರ |
| | | 55 | ಶ್ರೀರಂಗಪಟ್ಟಣ |
| 11 | ಬಳ್ಳಾರಿ | 56 | ಬಳ್ಳಾರಿ |
| | | 57 | ಸಂಡೂರು |
| | | 58 | ಶಿರುಗುಪ್ಪ |
| | | 59 | ಕುರುಗೋಡು |
| | | 60 | ಕಂಪ್ಲಿ |
| 12 | ಕೊಪ್ಪಳ | 61 | ಗಂಗಾವತಿ |
| | | 62 | ಕೊಪ್ಪಳ |
| | | 63 | ಕುಷ್ಟಗಿ |
| | | 64 | ಯಲಬುರ್ಗ |
| | | 65 | ಕರಟಗಿ |
| | | 66 | ಕುಕನೂರು |
| | | 67 | ಕನಕಗಿರಿ |
| 13 | ರಾಯಚೂರು | 68 | ಲಿಂಗಸುಗೂರು |
| | | 69 | ಮಾನ್ವಿ |
| | | 70 | ರಾಯಚೂರು |
| | | 71 | ಶಿರವಾರ |
| 14 | ಕಲಬುರಗಿ | 72 | ಅಫಜಲ್‌ಪುರ |
| | | 73 | ಆಳಂದ |
| | | 74 | ಚಿಂಚೋಳಿ |
| | | 75 | ಚಿತ್ತಾಪುರ |
| | | 76 | ಕಲಬುರಗಿ |
| | | 77 | ಜೇವರ್ಗಿ |

(ಟಿ.ಸಿ. ಕಾಂತರಾಜು)
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿ.ವಿ. ಹಾಗೂ ನೋಂದಣಿ ...)

| | | | |
|---|---|---|---|
| | | 78 | ಸೇಡಂ |
| | | 79 | ಕಳಗಿ |
| | | 80 | ಕಮಲಪುರ |
| | | 81 | ಯಡ್ರಾಮಿ |
| | | 82 | ಶಾಹಬಾದ್ |
| 15 | ಬೀದರ್ | 83 | ಬಾಲ್ಕಿ |
| | | 84 | ಬಸವಕಲ್ಯಾಣ |
| | | 85 | ಹುಲಸೂರು |
| 16 | ಬೆಳಗಾವಿ | 86 | ಅಥಣಿ |
| | | 87 | ಬೈಲಹೊಂಗಲ |
| | | 88 | ಚಿಕ್ಕೋಡಿ |
| | | 89 | ಗೋಕಾಕ್ |
| | | 90 | ಹುಕ್ಕೇರಿ |
| | | 91 | ರಾಮದುರ್ಗ |
| | | 92 | ರಾಯಬಾಗ್ |
| | | 93 | ಸವದತ್ತಿ |
| | | 94 | ಕಿತ್ತೂರು |
| | | 95 | ನಿಪ್ಪಾಣಿ |
| | | 96 | ಕಾಗವಾಡ |
| | | 97 | ಮುದಲಗಿ |
| | | 98 | ಯರಗಟ್ಟಿ |
| 17 | ಬಾಗಲಕೋಟೆ | 99 | ಬಾದಾಮಿ |
| | | 100 | ಬಾಗಲಕೋಟೆ |
| | | 101 | ಬೀಳಗಿ |
| | | 102 | ಹುನಗುಂದ |
| | | 103 | ಜಮಖಂಡಿ |
| | | 104 | ಮುಧೋಳ |
| | | 105 | ಗುಳೇದಗುಡ್ಡ |
| | | 106 | ಇಳಕಲ್ |
| | | 107 | ರಬಕವಿ ಬನಹಟ್ಟಿ |
| 18 | ವಿಜಯಪುರ | 108 | ಬಸವನ ಬಾಗೇವಾಡಿ |
| | | 109 | ವಿಜಯಪುರ |
| | | 110 | ಇಂಡಿ |
| | | 111 | ಮುದ್ದೆಬಿಹಾಳ |
| | | 112 | ಸಿಂದಗಿ |
| | | 113 | ಬಬ್ಲೇಶ್ವರ |
| | | 114 | ಚಡಚಣ |
| | | 115 | ನಿಡಗುಂದಿ |
| | | 116 | ತಾಳಿಕೋಟೆ |
| | | 117 | ಕೊಲ್ಹಾರ |
| | | 118 | ದೇವರಹಿಪ್ಪರಗಿ |
| | | 119 | ಆಲಮೇಲ |
| 19 | ಗದಗ | 120 | ಗದಗ |
| | | 121 | ನರಗುಂದ |

(ಟಿ.ಸಿ. ಕಾಂತರಾಜ್) 13/9/20[illegible]
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿ.ಪ. [illegible]

| | | | |
|---|---|---|---|
| | | 122 | ರೋಣ |
| | | 123 | ಶಿರಹಟ್ಟಿ |
| | | 124 | ಗಜೇಂದ್ರಘಡ |
| | | 125 | ಲಕ್ಷ್ಮೇಶ್ವರ |
| 20 | ಹಾವೇರಿ | 126 | ಹಾವೇರಿ |
| | | 127 | ಹಿರೇಕೆರೂರ್ |
| | | 128 | ರಾಣೆಬೆನ್ನೂರು |
| | | 129 | ಸವಣೂರು |
| | | 130 | ರಟ್ಟೆಹಳ್ಳಿ |
| 21 | ಧಾರವಾಡ | 131 | ಧಾರವಾಡ |
| | | 132 | ಹುಬ್ಬಳ್ಳಿ |
| | | 133 | ಕುಂದಗೋಳ |
| | | 134 | ನವಲಗುಂದ |
| | | 135 | ಹುಬ್ಬಳ್ಳಿನಗರ |
| 22 | ಶಿವಮೊಗ್ಗ | 136 | ಭದ್ರಾವತಿ |
| | | 137 | ಹೊಸನಗರ |
| | | 138 | ಸಾಗರ |
| | | 139 | ಶಿಕಾರಿಪುರ |
| | | 140 | ಶಿವಮೊಗ್ಗ |
| | | 141 | ಸೊರಬ |
| | | 142 | ತೀರ್ಥಹಳ್ಳಿ |
| 23 | ಹಾಸನ | 143 | ಅರಕಲಗೂಡು |
| 24 | ಚಿಕ್ಕಮಗಳೂರು | 144 | ಕಡೂರು |
| | | 145 | ಅಜ್ಜಂಪುರ |
| 25 | ಕೊಡಗು | 146 | ಮಡಿಕೇರಿ |
| | | 147 | ವಿರಾಜಪೇಟೆ |
| | | 148 | ಕುಶಾಲನಗರ |
| 26 | ಉಡುಪಿ | 149 | ಕಾರ್ಕಳ |
| 27 | ಉತ್ತರ ಕನ್ನಡ | 150 | ಹಳಿಯಾಳ |
| | | 151 | ಮುಂಡಗೋಡ್ |
| | | 152 | ಶಿರಸಿ |
| | | 153 | ಯಲ್ಲಾಪುರ |
| 28 | ಯಾದಗಿರಿ | 154 | ಶಹಾಪುರ |
| | | 155 | ವಡಗೇರಾ |
| 29 | ವಿಜಯನಗರ | 156 | ಹೊಸಪೇಟೆ |
| | | 157 | ಹಡಗಲಿ |
| | | 158 | ಹಗರಿಬೊಮ್ಮನಹಳ್ಳಿ |
| | | 159 | ಹರಪ್ಪನಹಳ್ಳಿ |
| | | 160 | ಕೊಟ್ಟೂರು |
| | | 161 | ಕೂಡ್ಲಿಗಿ |

(ಟಿ.ಸಿ. ಕಾಂತರಾಜ್) 13/9/2023
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಹಾಗೂ ನೋಂ&ಮು)

**ಅನುಬಂಧ-2**

**2023ರ ಮುಂಗಾರಿನಲ್ಲಿ ಸಾಧಾರಣ ಬರ ಪೀಡಿತ 34 ತಾಲ್ಲೂಕುಗಳ ಪಟ್ಟಿ**

| ಕ್ರ.ಸಂ | ಜಿಲ್ಲೆಗಳು | ಕ್ರ.ಸಂ | ತಾಲ್ಲೂಕುಗಳು |
|---|---|---|---|
| 1 | ಬೆಂಗಳೂರು ನಗರ | 1 | ಅನೇಕಲ್ |
| | | 2 | ಬೆಂಗಳೂರು ಉತ್ತರ |
| | | 3 | ಬೆಂಗಳೂರು ದಕ್ಷಿಣ |
| | | 4 | ಯಲಹಂಕ |
| 2 | ರಾಮನಗರ | 5 | ಚನ್ನಪಟ್ಟಣ |
| | | 6 | ಮಾಗಡಿ |
| 3 | ಕೋಲಾರ | 7 | ಮಾಲೂರು |
| 4 | ತುಮಕೂರು | 8 | ತುಮಕೂರು |
| 5 | ಚಾಮರಾಜನಗರ | 9 | ಗುಂಡ್ಲುಪೇಟೆ |
| | | 10 | ಕೊಳ್ಳೆಗಾಲ |
| | | 11 | ಹನೂರು |
| 6 | ರಾಯಚೂರು | 12 | ದೇವದುರ್ಗ |
| | | 13 | ಮಸ್ಕಿ |
| 7 | ಹಾಸನ | 14 | ಬೇಲೂರು |
| | | 15 | ಚನ್ನರಾಯಪಟ್ಟಣ |
| | | 16 | ಹೊಳೆನರಸೀಪುರ |
| | | 17 | ಸಕಲೇಶಪುರ |
| 8 | ಚಿಕ್ಕಮಗಳೂರು | 18 | ಕೊಪ್ಪ |
| | | 19 | ನರಸಿಂಹರಾಜಪುರ |
| | | 20 | ಶೃಂಗೇರಿ |
| | | 21 | ಕಳಸ |
| 9 | ಕೊಡಗು | 22 | ಸೋಮವಾರಪೇಟೆ |
| 10 | ದಕ್ಷಿಣ ಕನ್ನಡ | 23 | ಮಂಗಳೂರು |
| | | 24 | ಮೂಡಬಿದ್ರೆ |
| 11 | ಉಡುಪಿ | 25 | ಬ್ರಹ್ಮಾವರ |
| 12 | ಉತ್ತರ ಕನ್ನಡ | 26 | ಅಂಕೋಲ |
| | | 27 | ಭಟ್ಕಳ |
| | | 28 | ಕಾರವಾರ |
| | | 29 | ಕುಮಟ |
| | | 30 | ಜೋಯಿಡ (ಸೂಪ) |
| 13 | ಯಾದಗಿರಿ | 31 | ಶೋರಾಪುರ |
| | | 32 | ಯಾದಗಿರಿ |
| | | 33 | ಗುರುಮಿಟ್ಕಲ್ |
| | | 34 | ಹುಣಸಗಿ |

13/9/2023

**(ಟಿ.ಸಿ. ಕಾಂತರಾಜ್)**
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಹಾಗೂ ನೋಂ&ಮು)